## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 367 |
| 2 | ಸದಸ್ಯರ ಹೆಸರು | : | ಶ್ರೀ.ತಿಪ್ಪಣ್ಣ ಕಮಕನೂರ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸಬೇಕಾದ ದಿನಾಂಕ | : | 18.07.2019 |
| 4 | ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿ |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ಸರ್ಕಾರ ಇದುವರೆಗೂ ಬಜೆಟ್‌ನಲ್ಲಿ ಕಾಯ್ದಿರಿಸಿರುವ ಹಾಗೂ ಬಿಡುಗಡೆಯಾದ ಹಣವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಸರ್ಕಾರವು ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ನೀಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ:(ರೂ. ಕೋ. ಗಳಲ್ಲಿ)
<table>
<tr><th>ಆರ್ಥಿಕ ವರ್ಷ</th><th>ಸರ್ಕಾರದಿಂದ ಹಂಚಿಕೆಯಾದ ಅನುದಾನ</th><th>ಮಂಡಳಿಗೆ ಬಿಡುಗಡೆಯಾದ ಅನುದಾನ</th></tr>
<tr><td>2013-14</td><td>153.50</td><td>30.00</td></tr>
<tr><td>2014-15</td><td>600.00</td><td>300.00</td></tr>
<tr><td>2015-16</td><td>1000.00</td><td>750.00</td></tr>
<tr><td>2016-17</td><td>1000.00</td><td>750.00</td></tr>
<tr><td>2017-18</td><td>1000.00</td><td>800.00</td></tr>
<tr><td>2018-19</td><td>1000.00</td><td>1000.00</td></tr>
</table>
ಸರ್ಕಾರದಿಂದ ಮಂಡಳಿಗೆ ಹಂಚಿಕೆಯಾದ ಅನುದಾನವನ್ನು ಜಿಲ್ಲಾವಾರು ಕಾಯ್ದಿರಿಸುವ ಪದ್ಧತಿ ಇರುವುದಿಲ್ಲ. ಮಂಡಳಿಯಲ್ಲಿ ಅನುಮೋದಿತ ಕ್ರಿಯಾಯೋಜನೆಗೆ ಅನುಗುಣವಾಗಿ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತದೆ. ಮಂಡಳಿಯಲ್ಲಿ ಸದರಿ ಮಾಹಿತಿ 2018-19ರ ಕಾಮಗಾರಿಗಳ ಬಗ್ಗೆ ಮಾತ್ರ ಜಿಲ್ಲಾವಾರು ಲಭ್ಯವಿರುತ್ತದೆ. ಅದನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.</td></tr>
<tr><td>ಆ)</td><td>ಈ ಕಲಂ ಅನ್ವಯ ವಿಶೇಷ ಅನುದಾನ ನೀಡುವಂತೆ ಕೇಂದ್ರಕ್ಕೆ ಮನವಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಈ ಕುರಿತು ಮಾಹಿತಿ ನೀಡುವುದು?</td><td>-ಇಲ್ಲ-</td></tr>
</table>

ಸಂಖ್ಯೆ: ಪಿಡಿಎಸ್/ಹೆಚ್‌ಕೆಡಿ/14/2019

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

**ಕರ್ನಾಟಕ ವಿಧಾನ ಪರಿಷತ್ ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣ ಕಮಕನೂರ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:367(ಅ) ಕ್ಕೆ ಪೂರಕ ಟಿಪ್ಪಣಿ:**

2014-15ನೇ ಸಾಲಿಗಾಗಿ ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು 862.00 ಕೋಟಿಗಳಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ. ಮಂಡಳಿಗೆ ಆಯವ್ಯಯದಲ್ಲಿ ರೂ.600.00 ಕೋಟಿಗಳ ಅನುದಾನವನ್ನು ಒದಗಿಸಿ, ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ ಮತ್ತು ದಿನಾಂಕ:21-11-2014 ರಂದು ಕಲಬುರಗಿ ಜಿಲ್ಲೆಯಲ್ಲಿ ಜರುಗಿದ ಸಂಪುಟ ಸಭೆಯಲ್ಲಿ ಹೆಚ್ಚುವರಿಯಾಗಿ 400.00 ಕೋಟಿಯಲ್ಲಿ ಹೆಚ್‌ಕೆಆರ್‌ಡಿಬಿ ಕಾಮಗಾರಿಗಳಿಗಾಗಿ 262.00 ಕೋಟಿಗಳನ್ನು ಮಂಡಳಿಗೆ ಒದಗಿಸುವಂತೆ ನಿರ್ಣಯಿಸಲಾಗಿದೆ. ಅನುಮೋದನೆ ನೀಡಿದ ಎಲ್ಲಾ ಕಾಮಗಾರಿಗಳು ಮುಕ್ತಾಯ ಹಂತದಲ್ಲಿವೆ. ಪ್ರಯುಕ್ತ 2014-15ನೇ ಸಾಲಿಗೆ ಹೆಚ್ಚುವರಿಯಾಗಿ ಹೆಚ್‌ಕೆಆರ್‌ಡಿಬಿ ಕಾಮಗಾರಿಗಳಿಗಾಗಿ ಸರ್ಕಾರದಿಂದ ರೂ.262.00 ಕೋಟಿಗಳ ಅನುದಾನಕ್ಕೆ ಅನುಮೋದನೆ ಮತ್ತು ಬಿಡುಗಡೆಯಾಗುವುದು ಬಾಕಿ ಇರುತ್ತದೆ.

2017-18ನೇ ಸಾಲಿಗಾಗಿ ಮಂಡಳಿಯು ಸರ್ಕಾರದ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ 1500.00 ಕೋಟಿ ರೂ ಗಳಿಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದ್ದು, ಹಂಚಿಕೆಯಾಗಿ ಸರ್ಕಾರದಿಂದ ಮಂಜೂರಾತಿಯಾದ ಅನುದಾನ 1000.00 ಕೋಟಿಯಾಗಿರುತ್ತದೆ. ನಂತರದಲ್ಲಿ ಮಂಜೂರಾತಿ ನೀಡಿದ ಕಾಮಗಾರಿಗಳು ಪ್ರಾರಂಭವಾಗದೇ ಇರುವುದರಿಂದ ಕೆಲವು ಕಾಮಗಾರಿಗಳನ್ನು ಕೈಬಿಟ್ಟ ನಂತರ 1300.00 ಕೋಟಿ ರೂಗಳಿಗೆ 2017-18ನೇ ಸಾಲಿನ ಕ್ರಿಯಾ ಯೋಜನೆ ಮೊತ್ತವನ್ನು ಸೀಮಿತಗೊಳಿಸಲಾಗಿದೆ. ಅದಕ್ಕಾಗಿ ಹೆಚ್ಚುವರಿಯಾಗಿ 300.00 ಕೋಟಿ ರೂ.ಗಳಿಗೆ ಸರ್ಕಾರದಿಂದ ಅನುಮೋದನೆಯಾಗಿ ಬಿಡುಗಡೆಯಾಗುವುದು ಬಾಕಿ ಇರುತ್ತದೆ.

2018-19ನೇ ಸಾಲಿನಲ್ಲಿ ಸರ್ಕಾರದ ಆಯವ್ಯಯ ಭಾಷಣದಲ್ಲಿ ಮಂಡಳಿಗೆ 1500.00 ಕೋಟಿ ರೂಗಳನ್ನು ಘೋಷಿಸಲಾಗಿದೆ. ನಿಗದಿಪಡಿಸಿದ ಅನುದಾನವು 1000.00 ಕೋಟಿಯಾಗಿದ್ದು, ಸರ್ಕಾರದಿಂದ ಮಂಜೂರಾತಿಯು ಸಹ ನೀಡಲಾಗಿದೆ. ಕ್ರಿಯಾ ಯೋಜನೆಯನ್ನು 1000.00 ಕೋಟಿಗಳಿಗೆ ಸಿದ್ಧಪಡಿಸಲಾಗಿದೆ.

ಮಂಡಳಿಯಿಂದ ಅನುಮೋದನೆ ನೀಡಿದ 2013-14ನೇ ಸಾಲಿನಲ್ಲಿ ಕಾಮಗಾರಿಗಳು ಶೇ 100% ರಷ್ಟು, 2014-15ನೇ ಸಾಲಿನ ಶೇ98% ರಷ್ಟು 2015-16ನೇ ಸಾಲಿನ ಶೇ 95% ರಷ್ಟು 2016-17ನೇ ಸಾಲಿನ ಶೇ93%, ರಷ್ಟು, 2017-18ನೇ ಸಾಲಿನ ಶೇ78% ರಷ್ಟು, ಕಾಮಗಾರಿಗಳು ಪೂರ್ಣಗೊಂಡಿದ್ದು ಮತ್ತು 2018-19ನೇ ಸಾಲಿನ ಶೇ 15% ರಷ್ಟು ಪೂರ್ಣಗೊಂಡಿದ್ದು ಹಾಗೂ ಶೇ 79% ರಷ್ಟು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಸದರಿ ವಿಷಯವನ್ನು ತಮ್ಮ ಮಾಹಿತಿಗಾಗಿ ಹಾಗೂ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ಹಣಕಾಸು ನಿಯಂತ್ರಕರು,
ಹೈ.ಕ.ಪ್ರ.ಅ.ಮಂಡಳಿ,
ಕಲಬುರಗಿ.

# HYDERABAD KARNATAKA REGION DEVELOPMENT BOARD KALABURAGI

## ANNEXURE-1

Rs in lakhs

| Sl.no | Year | DISTRICT | | | | | | | TOTAL |
|---|---|---|---|---|---|---|---|---|---|
| | | Bidar | Kalaburagi | Yadgiri | Raichur | Koppal | Bellary | All discretionay quotas (CDQ/GDQ/CMDQ/CF/ADM | |
| 1 | 2013-14 | 2174.07 | 4438.84 | 1769.51 | 2736.91 | 1783.42 | 1907.08 | 200.00 | 15009.83 |
| 2 | 2014-15 | 10057.3 | 37484.73 | 8244.69 | 12521.20 | 8154.38 | 8723.24 | 1034.00 | 86219.54 |
| 3 | 2015-16 | 14789.62 | 27736.48 | 11577.16 | 17769.93 | 11344.91 | 13181.90 | 3600.00 | 100000.00 |
| 4 | 2016-17 | 14326.53 | 26948.07 | 11144.85 | 17214.05 | 10994.79 | 12771.71 | 6600.00 | 100000.00 |
| 5 | 2017-18 | 21364.18 | 40906.16 | 16726.91 | 25667.13 | 16393.58 | 19042.04 | 9900.00 | 150000.00 |
| 6 | 2018-19 | 13214.96 | 24790.66 | 10346.44 | 15878.31 | 10141.62 | 14649.01 | 10979.00 | 100000.00 |

17/2/19

Joint Director (Planning)
Hyderabad Karnataka Region
Development Board,
KALABURAGI.